**ಗೋಪಿ:** ಪತಿಪತ್ನಿಯ ನಡುವಿನ ಕಲಹ ಮಿತಿ ಮೀರಿದಾಗ ಅವರ ನಡುವಿನ ಸಂಬಂಧವೂ ಬದಲಾಗುತ್ತದೆ.
**ಗುಂಡ:** ಅದು ಹೇಗೆ?
**ಗೋಪಿ:** ಕೊನೆಗೆ ಸೋತು ಶರಣಾದ ಪತಿ, 'ಇನ್ನಾದರೂ ಸುಮ್ಮನಿರು ನನ್ನಮ್ಮಾ..' ಎಂದು ಹೇಳುವ ಹಾಗೆ.

ಓರ್ವ ಬುದ್ಧಿವಂತ ಪುರುಷ ಯಾವುದೇ ನಿರ್ಧಾರ ತೆಗೆದುಕೊಳ್ಳುವಾಗ ತನ್ನ ಕಣ್ಣುಗಳನ್ನು ಮುಚ್ಚಿಕೊಳ್ಳುತ್ತಾನೆ. ತುಂಬಾ ಆಲೋಚಿಸುತ್ತಾನೆ. ಹೃದಯದ ಮಾತನ್ನಾಲಿಸುತ್ತಾನೆ. ತಲೆ ಉಪಯೋಗಿಸುತ್ತಾನೆ ಮತ್ತು ಅಂತಿಮವಾಗಿ ತನ್ನ ಪತ್ನಿ ಹೇಳಿದ್ದನ್ನು ಚಾಚೂ ತಪ್ಪದೆ ಮಾಡುತ್ತಾನೆ.

ಹುಡುಗಿಯರು ಪ್ರತೀ ಸನ್ನಿವೇಶದಲ್ಲೂ ಹೆದರುತ್ತಾರೆ. ಏಕಾಂಗಿಯಾಗಿದ್ದಾಗ ದೆವ್ವಗಳ ಹೆದರಿಕೆ, ಗುಂಪಿನಲ್ಲಿದ್ದರೆ ಜನರ ಹೆದರಿಕೆ, ಗಾಳಿ ಬೀಸುತ್ತಿದ್ದರೆ ದುಪಟ್ಟಾ ಹಾರುವ ಹೆದರಿಕೆ, ಯಾರಾದರೂ ನೋಡುತ್ತಿದ್ದರೆ ಅವರ ದೃಷ್ಟಿಯ ಹೆದರಿಕೆ, ಬಾಲ್ಯದಲ್ಲಿ ಅಪ್ಪಅಮ್ಮನ ಹೆದರಿಕೆ, ಯೌವನದಲ್ಲಿ ಅಣ್ಣಂದಿರ ಹೆದರಿಕೆ. ಹೀಗೆ ಅವಳು ಹೆದರುತ್ತಲೇ ಇರುತ್ತಾಳೆ. ತನಗೊಬ್ಬ ಒಳ್ಳೆಯ ಜೀವನ ಸಂಗಾತಿ ಸಿಗುವ ತನಕ. ಆ ಬಳಿಕ ಈ ಎಲ್ಲಾ ಹೆದರಿಕೆಗಳ ಮುಯ್ಯಿ ಆ ವ್ಯಕ್ತಿಯ ಮೇಲೆ ಜೀವನ ಪರ್ಯಂತ ತೀರಿಸಿಕೊಳ್ಳುತ್ತಾಳೆ.



ಬೆಲೆ ಇಳಿಸಿ ಅಂತ ಕೈ ಎತ್ತಿ ಎತ್ತಿ ನಿತ್ಯವೂ ಹೋರಾಟ ಮಾಡಿ, ಈಗ ಇವರು ಕೈಯನ್ನೇ ಇಳಿಸೋಕೆ ಆಗ್ತಿಲ್ಲ ಡಾಕ್ಟ್ರೆ.

ಮೆಡಿಕಲ್ ಕಾಲೇಜಿನಲ್ಲಿ ನಡೆದ ಪ್ರಸಂಗ.
**ಪ್ರಾಧ್ಯಾಪಕರು:** ನೆನಪಿರಲಿ, ನಾವು ಹೋರಾಡಬೇಕಿರುವುದು ರೋಗದೊಂದಿಗೆ, ರೋಗಿಯ ಜೊತೆಗಲ್ಲ. ಅರ್ಥವಾಯಿತೆ?
**ಮೆಡಿಕಲ್ ವಿದ್ಯಾರ್ಥಿ:** ಹೌದು ಸರ್!
**ಪ್ರಾಧ್ಯಾಪಕರು:** ಏನರ್ಥವಾಯಿತೆಂದು ಉದಾಹರಣೆಯೊಂದಿಗೆ ವಿವರಿಸು.
**ಮೆಡಿಕಲ್ ವಿದ್ಯಾರ್ಥಿ:** ಅಂದರೆ, ಯಾರಾದರೂ ಅತಿಯಾಗಿ ಪಿಜ್ಜಾ ಬರ್ಗರ್ ತಿನ್ನುತ್ತಿದ್ದರೆ ನಾವು ಅವರಿಗೆ ತಿಳಿ ಹೇಳಬಾರದು. ಅವರಿಂದ ಅದನ್ನು ಕಸಿದು ನಾವೇ ತಿಂದು ಮುಗಿಸಿ ಬಿಡಬೇಕು.


ಸಲೂನ್‌ನಲ್ಲಿ ಹೇರ್ ಕಟಿಂಗ್ ಮಾಡಿಸಿಕೊಂಡು ಬಂದ ಗೋಪಿ ಹೆಂಡತಿ ರತ್ನಾಳ ಬಳಿ ಹೀಗೆ ಕೇಳಿದ...
**ಗೋಪಿ:** ಈಗ ನಾನು ನಿನಗಿಂತ ಹತ್ತು ವರ್ಷ ಚಿಕ್ಕವನಾಗಿ ಕಾಣಿಸುತ್ತಿದ್ದೇನೆ ತಾನೆ? ಹಿಂದು ಮುಂದು ಯೋಚಿಸದೆ ರತ್ನಾ ತಕ್ಷಣ ಉಸುರಿದಳು.
**ರತ್ನಾ:** ತಲೆ ಪೂರ್ತಿ ಬೋಳಿಸಿಕೊಂಡಿದ್ದರೆ ಈಗ ತಾನೇ ಜನಿಸಿದ ಹಸುಳೆಯಂತೆ ಕಾಣಿಸುತ್ತಿದ್ದಿರಿ.

**ಪತ್ನಿ:** ರೀ, ಈ ದಿನಪತ್ರಿಕೆಯಲ್ಲಿ ಒಬ್ಬಾತ ತನ್ನ ಪತ್ನಿಯನ್ನು ಮಾರಿಬಿಟ್ಟನೆಂಬ ಸುದ್ದಿಯಿದೆ.
**ಪತಿ:** ಹೌದೆ, ಎಷ್ಟಕ್ಕೆ?
**ಪತ್ನಿ:** ಒಂದು ಸೈಕಲ್ ಜೊತೆಗೆ ವಿನಿಮಯ ಮಾಡಿಕೊಂಡನಂತೆ. ನೀವು ಹಾಗೆ ಮಾಡೋದಿಲ್ಲ ತಾನೆ?
**ಪತಿ:** ಎಲ್ಲಾದರೂ ಉಂಟೆ. ಯಕಶ್ಚಿತ್ ಸೈಕಲ್ ತಕ್ಕೊಂಡು ನಾನೇನು ಮಾಡಲಿ?

**ಗೀತಾ:** ನಿನ್ನ ಪತಿ ಯಾವ ಫೀಲ್ಡ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ?
**ಅನಿತಾ:** ಆಯಿಲ್ ಮತ್ತು ಗ್ಯಾಸ್!
**ಗೀತಾ:** ವಾವ್!.. ಅವರ ಪೋಸ್ಟಿಂಗ್ ಎಲ್ಲಿ?
**ಅನಿತಾ:** ಅಡುಗೆ ಕೋಣೆಯಲ್ಲಿ.

**ಪತ್ನಿ:** ರೀ... ಎಷ್ಟೂಂತ ಮಲಗ್ತೀರಿ? ಎದ್ದೇಳಿ, ನಾನು ದೋಸೆ ಮಾಡುತ್ತಿದ್ದೇನೆ.
**ಪತಿ:** ಸರಿ, ಮಾಡು. ಅದಕ್ಕೇನಂತೆ? ನಾನೇನೂ ಕಾವಲಿ ಮೇಲೆ ಮಲಗಿಲ್ಲವಲ್ಲ.

ಸಂಗ್ರಹ: **ರಮಣ್ ಶೆಟ್ಟಿ ರೆಂಜಾಳ, ಮುಂಬೈ**




**ಗುಂಡ:** ನಡಿ ಪೊಲೀಸ್ ಸ್ಟೇಷನ್‌ಗೆ.
**ರಿಕ್ಷಾದವ:** ಯಾಕ್ ಸಾರ್ ನಾನೇನು ತಪ್ಪು ಮಾಡಿದೆ?
**ಗುಂಡ:** ಯಾಕಂದ್ರೆ ನಾನು ಕೆಲಸ ಮಾಡೋದು ಅಲ್ಲೇ ಕಣಯ್ಯಾ.

**ಹೆಂಡತಿ:** ರೀ, ನಿಮ್ ಫ್ರೆಂಡ್ ಮದುವೆ ಆಗ್ತಾ ಇರೋ ಹುಡುಗಿ ನೋಡಕ್ಕೆ ಒಂದ್ ಚೂರೂ ಚೆನ್ನಾಗಿಲ್ಲ. ನೀವಾದರೂ ಒಂದ್ ಸ್ವಲ್ಪ ಅವರಿಗೆ ಹೇಳಿ.
**ಗಂಡ:** ನಾನು ಯಾಕೆ ಹೇಳಲಿ, ನಾನು ನಿನ್ನ ಮದುವೆ ಆಗುವಾಗ ಬಡ್ಡಿ ಮಗ ಸುಮ್ನೆ ನಗ್ತಾ ಇದ್ದ.

**ಕಮಲಿ:** ಸನ್ಯಾಸಿಗೂ ಸಂಸಾರಿಗೂ ಇರುವ ವ್ಯತ್ಯಾಸ ಏನು ಅಂತ ನಿಮಗೆ ಗೊತ್ತಾ?
**ವಿಶ್ವ:** ಹುಲಿ ಚರ್ಮದ ಮೇಲೆ ಮಲಗೋನು ಸನ್ಯಾಸಿ. ಹುಲಿಯ ಜೊತೆಯಲ್ಲಿಯೇ ಮಲಗುವವನು ನಿಜವಾದ ಸಂಸಾರಿ.

**ಮೇಷ್ಟ್ರು:** ಗಂಡಭೇರುಂಡ ಪದವನ್ನು ವಿವರಿಸು.
**ಪುಟ್ಟ:** ತುಂಬಾ ಸುಲಭ, ಹೆಂಡತಿಯಿಂದ ದೂರ ಕುಳಿತು ಒಬ್ಬನೇ ಊಟ ಮಾಡುವ ಗಂಡ, ಬೇರೆ ಉಂಡ ಅಂತ ಸಾರ್!

ಸಂಗ್ರಹ: **ಆರ್. ವೀರೇಶ್ ಕುಮಾರ್, ಬೆಂಗಳೂರು**